# ಗೋಸಂರಕ್ಷಣೆಗಾಗಿ HEAL ಅಳವಡಿಸಿಕೊಳ್ಳಿ

ಪರಿಸರ ದಿನಾಚರಣೆಯ ಮುಂದುವರೆದ ಭಾಗವಾಗಿ ದಿನಾಂಕ 11.06.2023ರಂದು ಗೋಪಾಲ್ಸ್ ತಂಡದ ವತಿಯಿಂದ ನಂದಿ ಬೆಟ್ಟದಲ್ಲಿ Trek2HEAL ಎನ್ನುವ ವಿಶೇಷ ಚಾರಣ ಏರ್ಪಡಿಸಲಾಗಿತ್ತು. ಸುಮಾರು 350 ಉತ್ಸಾಹಿ ತರುಣರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಗೋಪಾಲ್ಸ್ ತಂಡದ ಬಹು ನಿರೀಕ್ಷಿತ ಊಇಂಐ – Health (ಉತ್ತಮ ಆರೋಗ್ಯ) Environment (ಮಾಲಿನ್ಯಮುಕ್ತ ಪರಿಸರ) Agriculture (ವಿಷಮುಕ್ತ ದೇಸೀ ಗೋವು ಆಧಾರಿತ ಕೃಷಿ) and Lifestyle (ಸರಳ, ಸುಸ್ಥಿರ ಜೀವನಪದ್ಧತಿ) ಎಂಬ ನಾಲ್ಕು ವಿಷಯಗಳಿಗೆ ದೇಸಿ ಗೋವು ಹೇಗೆ ಪ್ರಮುಖವಾಗುತ್ತದೆ ಎಂಬುದರ ಕುರಿತು ತಿಳಿಯುವ ಪ್ರಯತ್ನಪಟ್ಟರು.

ದೇಸೀ ಗೋವುಗಳ ಸಂರಕ್ಷಣೆ ಮತ್ತು ಅದರ ಪ್ರಯೋಜನದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲೆಂದು 2014ರಲ್ಲಿ ಸಮಾನ ಮನಸ್ಕ ಯುವಕರು ಅದರಲ್ಲೂ ಸಾಫ್ಟ್‌ವೇರ್ ಉದ್ಯೋಗಿಗಳು ಸೇರಿ ಬೆಂಗಳೂರಿನಲ್ಲಿ ಪ್ರಾರಂಭಿಸಿದ ಗೋಪಾಲ್ಸ್ ತಂಡ ಪ್ರಸ್ತುತ ಮೈಸೂರು, ಗುಲ್ಬರ್ಗಾ, ಹೈದರಾಬಾದ್, ಚೆನ್ನೈ, ಕೊಯಮತ್ತೂರು, ತಿರುನೆಲ್ವೇಲಿ ಸೇರಿದಂತೆ ಹಲವು ಕಡೆ ತನ್ನ ಕಾರ್ಯವಿಸ್ತಾರ ಮಾಡಿದೆ. 'ಗೋ' ಎಂದರೆ ನಾಟಿ ಹಸು. 'ಪಾಲ್ಸ್' ಎಂದರೆ ಹಸುಗಳ ಸ್ನೇಹಿತರು ಎಂಬ ಅರ್ಥ. ಕೊರೊನಾ ಮುನ್ನ ದೇಶದ ಹತ್ತಾರು ಗೋಶಾಲೆಗಳಲ್ಲಿ ಮತ್ತು ಸಾವಯವ ಕೃಷಿಕರ ತೋಟಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ದೇಸಿ ಗೋವಿನ ಮಹತ್ತ್ವ ತಿಳಿಸುವ ಪ್ರಯತ್ನವಾಯಿತು. ಸಾವಿರಾರು ಮಂದಿ ತಮ್ಮ ಮನೆಯಲ್ಲಿ ಬಳಸುತ್ತಿದ್ದ ವಿದೇಶಿ ಕಂಪೆನಿಗಳ ಉತ್ಪನ್ನಗಳ ಬದಲಿಗೆ ಹತ್ತಿರದ ಗೋಶಾಲೆಗಳು ತಯಾರಿಸುವ ದಂತಮಂಜನ, ಸೊಳ್ಳೆ ಬತ್ತಿ, ಧೂಪ, ಪೆನಾಯಿಲ್, ಗೋ ಅರ್ಕ, ನಾಟಿ ಹಸು ಹಾಲು–ತುಪ್ಪ, ಸಾವಯವ ಧಾನ್ಯಗಳು ಸೇರಿದಂತೆ ಹಲವು ದಿನಬಳಕೆ ವಸ್ತುಗಳನ್ನು ಉಪಯೋಗಿಸುವಂತಾಗಿದೆ.

ಗೋವನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆಂದು ವಾಹನ ನಿಲ್ಲಿಸಿ ವಿಚಾರಿಸುವ ಬದಲು, ಗೋವು ವಾಹನವನ್ನೇ ಏರದೇ ಇರುವುದಕ್ಕೆ ಏನು ಮಾಡಬಹುದು ಎಂದು ತಿಳಿಸುವುದೇ ಗೋಪಾಲ್ಸ್‌ನ ಉದ್ದೇಶ. ಹಾಲಿಗಷ್ಟೇ ಅಲ್ಲದೇ ಸಗಣಿ ಗಂಜಲಕ್ಕೂ ಉತ್ತಮ ಬೆಲೆ ಬಂದರೆ ಯಾವ ರೈತ ಗೋವನ್ನು ಕಸಾಯಿಗೆ ಕೊಡುತ್ತಾನೆ ನೀವೇ ಹೇಳಿ? ಈ ವಿಷಯವನ್ನು ಗೋಪಾಲ್ಸ್‌ನ ಕಾರ್ಯಕ್ರಮಗಳಲ್ಲಿ ಪ್ರಾತ್ಯಕ್ಷಿಕೆಯ ಮೂಲಕ ಜನರಿಗೆ ತೋರಿಸಲಾಗುವುದು. ದೇಸಿ ಗೋವಿಗೂ ವಿದೇಶಿ ಹೆಚ್‌ಎಫ್ ಜರ್ಸಿಗೂ ಇರುವ ವ್ಯತ್ಯಾಸ, ಜೀವಾಮೃತ ತಯಾರಿ, ಸಗಣಿಯಿಂದ ಧೂಪ, ಗಣೇಶ ಮತ್ತಿತರ ಮೂರ್ತಿಗಳನ್ನು ತಯಾರಿಸುವುದು, ಗೋಮೂತ್ರದಿಂದ ಗೋ ಅರ್ಕ, ಫೆನಾಯಿಲ್, ಸಾವಯವ ಕೀಟನಾಶಕಗಳನ್ನು ತಯಾರಿಸುವುದು ಹೀಗೆ ಭಾಗವಹಿಸಿದವರ ಕೈಯಲ್ಲಿ ಅನೇಕ ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. Cow cuddling ಎಂದು ವಿದೇಶಗಳಲ್ಲಿ ದುಬಾರಿ ಬೆಲೆತೆತ್ತು ಹಸುಗಳನ್ನು ತಬ್ಬುವುದನ್ನು ಇಲ್ಲಿ ಉಚಿತವಾಗಿ ಮಾಡಬಹುದು.




ಕರುಗಳನ್ನು ಮುಟ್ಟಿ elfi with calf ಎಂದು ಹ್ಯಾಶ್‌ಟ್ಯಾಗ್‌ನೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಾರೆ. ತಮ್ಮ ಊರಿನ ಸ್ಥಳೀಯ ಗೋವು ಯಾವುದೆಂದು ಪ್ರಶ್ನಿಸಿ ಅದರ ಮಹತ್ತ್ವವನ್ನು ತಿಳಿಸಲಾಗುತ್ತದೆ. ದೇಸಿ ಹಸು ಉಳಿಸುವ ಇಂತಹ ಕಾರ್ಯಕ್ರಮಗಳಿಗೆ ಬರುವವರೆಲ್ಲರೂ ಸಾಮಾನ್ಯವಾಗಿ ಮಧ್ಯವಯಸ್ಕರು, ವಯೋವೃದ್ಧರು ಮತ್ತು ಚಿಕ್ಕ ಮಕ್ಕಳು. ಆದರೆ ಪ್ರಸ್ತುತ ನಮ್ಮ ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಯುವಕರೇ. ಇವರೇ ಮುಂದೆ ದೇಶವನ್ನು ಮುನ್ನಡೆಸುವವರು. ನಮ್ಮ ಶಿಕ್ಷಣ ವ್ಯವಸ್ಥೆಯಿಂದ ಅವರಿಗೆ ಭಾರತೀಯ ಸಂಸ್ಕೃತಿಯ ಪರಿಚಯವಿಲ್ಲ. ಇನ್ನು ದೇಸಿ ಹಸು ಮತ್ತು ಅದರ ಮಹತ್ತ್ವವಂತೂ ಮರೀಚಿಕೆಯೇ. ಹಾಗಾಗಿ ಯುವಕರನ್ನು ಸಾವಯವ ಕೃಷಿ ಮತ್ತು ದೇಸಿ ಹಸುವಿನತ್ತ ಸೆಳೆಯಲು ಜನವರಿ ಒಂದು 2023ರಂದು ಕಬ್ಬನ್ ಪಾರ್ಕನಲ್ಲಿ 'ವಾಕ್ ಟು ಹೀಲ್' ಎಂಬ ನಡಿಗೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಅವರೊಂದಿಗೆ ನಮ್ಮ ಉದ್ದೇಶ ಹಂಚಿಕೊಂಡಾಗ ಬಹಳ ಸಂತಸದಿಂದ ತಾವು ಬರುವುದಾಗಿ ಒಪ್ಪಿಕೊಂಡರು. ಇದೇ ರೀತಿ ಸಮಾಜದ ವಿವಿಧ ಕ್ಷೇತ್ರಗಳ ಪ್ರಮುಖ ವ್ಯಕ್ತಿಗಳಾದ ರಾಷ್ಟ್ರೋತ್ಥಾನದ ದ್ವಾರಕಾನಾಥ್,



**ಸಂದೀಪ್ ಮಂಜುನಾಥ್**
ಎಂ.ಎಸ್ಸಿ,ಕೃಷಿ, ಹುಣಸೂರು

ಪ್ರಶಾಂತಿ ಆಯುರ್ವೇದದ ಗಿರಿಧರ ಕಜೆ, ಜಿ.ಜಿ. ಗಂಗಾಧರನ್, ಪದ್ಮಶ್ರೀ ಕೆ.ವಿ. ವೆಂಕಟೇಶ್, ಡಾ. ನಾಗಭೂಷಣ, ಆಚಾರ್ಯ ಅರುಣ್ ಪ್ರಕಾಶ್ ಸೇರಿ ಒಟ್ಟು 650 ಮಂದಿ ಭಾಗವಹಿಸಿದರು. ಹೊಸ ವರ್ಷದ ದಿನವೇ ದೇಸಿ ಗೋ ಉತ್ಪನ್ನಗಳನ್ನು ಬಳಸುವ ಮೂಲಕ ಗೋರಕ್ಷಕರಾಗುತ್ತೇವೆಂದು ಎಲ್ಲರೂ ಪ್ರತಿಜ್ಞೆ ಮಾಡಿದರು.

ಇದಾದ ನಂತರ ಎಂದಿನಂತೆ ಕೆಲ ಗೋಶಾಲೆಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. ಪ್ರಸ್ತುತ ಟ್ರೆಕ್ ಟು ಹೀಲ್ ಎನ್ನುವ ವಿಶೇಷವಾದ ಕಾರ್ಯಕ್ರಮ ಯಶಸ್ವಿಯಾಗಿದೆ. ಭಾಗವಹಿಸಿದ ಎಲ್ಲರೂ ಯುವಕರೇ. ಸುಮಾರು ಮೂರು ತಿಂಗಳಿಂದ ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತಿತ್ತು. ಗೋಪಾಲ್ಸ್‌ನ ಸ್ವಯಂಸೇವಕರೆಲ್ಲರೂ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರು. ತಮ್ಮ ಕೆಲಸದ ನಡುವೆ ದೇಸಿ ಗೋವುಗಳನ್ನು ಉಳಿಸಬೇಕೆಂದು ಸಮಯ ಮಾಡಿಕೊಂಡು ಈ ರೀತಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವರು ಪೋಸ್ಟರ್ ತಯಾರಿಸಿದರೆ ಇನ್ನು ಕೆಲವರು ವಿವಿಧ ಇಲಾಖೆಗಳಿಗೆ ಪತ್ರ ಬರೆದು ಅನುಮತಿ ಪಡೆದರು. ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಯಕ್ರಮದ ಕುರಿತು ಪ್ರಸಿದ್ಧ ವ್ಯಕ್ತಿಗಳ ಸಣ್ಣ ವಿಡಿಯೋಗಳನ್ನು ಹಂಚಲಾಯಿತು. ಇದೆಲ್ಲದರ ಫಲವಾಗಿ 350 ಮಂದಿ ಯುವಕರು ಬೆಟ್ಟ ಏರಲು ಸಿದ್ಧರಾದರು. ನಾಗಾರ್ಜುನ ಕಾಲೇಜು, ಎನ್ಎಮ್ಐಟಿ, ಬಿಎಂಎಸ್, ಮತ್ತು ಆರ್‌ವಿ ಕಾಲೇಜಿನ ವಿದ್ಯಾರ್ಥಿಗಳು ಮತ್ತು ರಾಜ್ಯ ಎನ್ಎಸ್ಎಸ್ ವಿಭಾಗದ ಸೇವಾರ್ಥಿಗಳು ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ವಾಕ್ ಟು ಹೀಲ್‌ನ ಯಶಸ್ಸು ಗಮನಿಸಿದ ಕೆಲ ಕಂಪನಿಗಳು ನಮ್ಮ ಸಹಾಯಕ್ಕೆ ಬಂದವು. ಐ ಲಿಂಕ್ ಡಿಜಿಟಲ್‌ನವರು ಭಾಗವಹಿಸಿದ ಎಲ್ಲರಿಗೂ ಮಾ ಗೋ ಪ್ರಾಡಕ್ಟ್ಸ್‌ನ ಗವ್ಯೋತ್ಪನ್ನದ ಉಡುಗೊರೆ ನೀಡಿದರು. 'ಪರಾ' ಸಂಸ್ಥೆಯ ಅಭಿಷೇಕ್ ಅಯ್ಯಪ್ಪನ್ ಸ್ವತಃ ಮುಂದೆ ಬಂದು ಕಾರ್ಯಕ್ರಮಕ್ಕೆ ಆಂಕರಿಂಗ್ ಮಾಡಿದರು. ಅಪೋಲೋ ಅವರು ಆಂಬುಲೈನ್ಸ್ ಸೇವೆ ಒದಗಿಸಿದರು. ಮಾ ಗೋ ಪ್ರಾಡಕ್ಟ್ಸ್‌ನವರು ಊಟದ ವ್ಯವಸ್ಥೆ ಮಾಡಿದರು. ಭಾರತೀಯ ಪುರಾತತ್ತ್ವ ಇಲಾಖೆಯವರು ಎಲ್ಲ ರೀತಿಯ ಸಹಕಾರ ನೀಡಲು ಮುಂದಾದರು. ಕಲ್ಬುರ್ಗಿಯ ಕೊಂಚಾರು ಸವಿತಾ ಪೀಠದ ಶ್ರೀ ಶ್ರೀ ಸವಿತಾನಂದ ಮಹಾಸ್ವಾಮಿಗಳು ತಾವು ಬರುವುದಾಗಿ ತಿಳಿಸಿದರು. ಗೂಗಲ್‌ನ ಪ್ರಮುಖ ಹುದ್ದೆಯಲ್ಲಿರುವ ಪ್ರೀತಿ ಶ್ರೀನಿವಾಸ್, ರಾಷ್ಟ್ರೋತ್ಥಾನದ ಸುವರ್ಣಿನೀ ಕೊಣಲೆ, ಗೋಸೇವಾ ಪ್ರಮುಖರಾದ ಪ್ರವೀಣ ಸರಳಾಯ, ಮಾ ಗೋ ಪ್ರಾಡಕ್ಟ್ಸ್‌ನ ಶಿವಕುಮಾರ್, ಮದರ್‌ಹುಡ್ ಆಸ್ಪತ್ರೆಯ ಸುಮಂತ್ ಅವರು ಸೇರಿದಂತೆ ಹಲವು ಗಣ್ಯರು ಚಾರಣಕ್ಕೆ ಚಾಲನೆ ನೀಡಿದರು.

ಮುಂಜಾನೆ 7 ಘಂಟೆಗೆ ಲಘು ವ್ಯಾಯಾಮದ ನಂತರ ಉಪಾಹಾರ ಸೇವಿಸಿ ಸರ್ಕಾರಿ ಶಾಲೆಯ ಆವರಣದಲ್ಲಿ ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಚಾರಣ ಪ್ರಾರಂಭವಾಯಿತು. ಭೋಗನಂದೀಶ್ವರನ ದೇವಾಲಯದಿಂದ ನಂದಿ ಬೆಟ್ಟದ ಮೇಲಿನ ಯೋಗ ನಂದೀಶ್ವರನ ದೇವಾಲಯದವರೆಗೆ ಹತ್ತಾರು ಹಾಡು ಹಾಡುತ್ತಾ ಘೋಷಣೆ ಕೂಗುತ್ತಾ ಎಲ್ಲರೂ ಬೆಟ್ಟ ಏರಿದರು. ಮಾರ್ಗ ಮಧ್ಯೆ ನಂದಿಯ ಪ್ರಕೃತಿ ಎಲ್ಲರ ಮನಸೂರೆಗೊಳಿಸಿತು. ಬೆಟ್ಟ ಏರುತ್ತಾ ಏರುತ್ತಾ ಮೇಲೆ ಹೋದಂತೆ ತಂಗಾಳಿ ಬೀಸಿ ಆಯಾಸವನ್ನೆಲ್ಲಾ ಮರೆಯಿಸಿತು. ಭೋಗನಂದೀಶ್ವರನಿಗೆ ನಮಸ್ಕರಿಸಿ ಪಕ್ಕದಲ್ಲಿರುವ ಮಂಟಪದಲ್ಲಿ ಎಲ್ಲರೂ ಆಸೀನರಾದೆವು. ಸವಿತಾಪೀಠದ ಸ್ವಾಮಿಗಳು ದೇಸಿ ಗೋವಿನ ಮಹತ್ತ್ವ ಮತ್ತು ಅವರ ಮುಂದಿನ ಯೋಜನೆಗಳ ಕುರಿತು ವಿವರಿಸಿದರು. ನನಗೂ ಮಾತನಾಡಲು ಅವಕಾಶ ಸಿಕ್ಕಿತು. ನಿತ್ಯಜೀವನ ಪ್ಲಾಸ್ಟಿಕ್‌ಮುಕ್ತವಾಗಿರುವುದು ಹೇಗೆ ಮತ್ತು ಹಿಂದಿನ ಲೇಖನವೊಂದರಲ್ಲಿ ವಿವರಿಸಿದ್ದ ಪರಿಸರಸ್ನೇಹಿ ವಿಚಾರಗಳನ್ನು ಹಂಚಿಕೊಂಡೆ. HEALನ ಕೊನೆ ಸ್ತಂಭ L ಅಂದರೆ lifestyle ಸರಿಮಾಡಿಕೊಂಡರೆ ತನ್ನಿಂದ ತಾನೆ ಇತರೆ ಗುರಿಗಳು ಅಂದರೆ Health, Agriculture, Environment ಸರಿ ಆಗುವುದೆಂದು ಹಲವರಿಗೆ ಅರಿವಾಯಿತು. ಬರಡಾದ ಕೃಷಿಭೂಮಿಗೆ ದೇಸಿ ಹಸುವಿನ ಜೀವಾಮೃತದಿಂದ ಬಂಗಾರದಂತಹ ವಿಷಮುಕ್ತ ಬೆಳೆ ಬೆಳೆಯಬಹುದೆಂದು ಕಾಲೇಜು ವಿದ್ಯಾರ್ಥಿಗಳಿಗೆ ಅರ್ಥವಾಗುತ್ತಾ ಹೋಯಿತು.

ನೀವು ಪುಣ್ಯವಂತರು. ಏಕೆಂದರೆ ನಿಮ್ಮ ಇತರೆ ಸ್ನೇಹಿತರ ಹಾಗೆ ಭಾನುವಾರ ಮಾಲ್ ಅಥವಾ ಸಿನಿಮಾಗೆ ಹೋಗದೆ ಸಮಾಜದ ಒಳಿತಿಗಾಗಿ ಇಲ್ಲಿ ಸೇರಿದ್ದೀರಿ ಎಂದಾಗ ಹಲವರಿಗೆ ಹೆಮ್ಮೆಯೆನಿಸಿತು. ಗೋವಿನ ಉಳಿವು ಸರ್ಕಾರದ ನೀತಿಗಳಿಂದ ಸಾಧ್ಯವಿಲ್ಲ. ನಿಮ್ಮೆಲ್ಲರ ಸಹಕಾರದಿಂದ ಸಾಧ್ಯ. ನಾನು ವೈಯಕ್ತಿಕವಾಗಿ ಏನು ಮಾಡುತ್ತಿರುವೆ ಎನ್ನುವುದು ಮುಖ್ಯವೇ ಹೊರತು ಸರ್ಕಾರ ಮಾಡಲಿ ಅಥವಾ ಮತ್ತಾರೋ ಮಾಡಲಿ ಎನ್ನುವ ಮನಃಸ್ಥಿತಿ ಬದಲಾಗಬೇಕೆಂದಾಗ ಹಲವರು ನಾವು ಇನ್ನು ಮುಂದೆ ಮಾಡುವ ಪ್ರತಿ ಕಾರ್ಯದಲ್ಲೂ ಪರಿಸರ ಕಾಳಜಿ ವಹಿಸುತ್ತೇವೆಂದರು.

ಗೋಪಾಲ್ಸ್ ತಂಡ Sponsor A Calf (SAC) ಎಂಬ ಯೋಜನೆ ತಂದಿದೆ. ಇದರಲ್ಲಿ ನಾವು ನಿತ್ಯ ಒಂದು ಹೊತ್ತು ಕಾಫಿ/ಟೀಗೆ ಖರ್ಚು ಮಾಡುವ ಹತ್ತು ರೂಪಾಯಿಯನ್ನು ಉಳಿಸಿ ವರ್ಷಕ್ಕೆ 3,650 ರೂ.ಗಳನ್ನು ದೇಣಿಗೆ ನೀಡಬೇಕು. ಈ ಹಣವನ್ನು ಈಗಾಗಲೇ ತಂಡ ದತ್ತು ಪಡೆದಿರುವ ಗ್ರಾಮ ಮತ್ತು ರೈತರ ಅಭಿವೃದ್ಧಿಗಾಗಿ ಬಳಸಲಾಗುತ್ತದೆ. ಈ ಸುಸಂದರ್ಭದಲ್ಲಿ ಕೆಲ ಸಾವಯವ ಕೃಷಿಕರಿಗೆ ಇದೇ ದೇಣಿಗೆ ಹಣದ ಚೆಕ್ ನೀಡಿ ಸನ್ಮಾನಿಸಲಾಯಿತು.

ಒಟ್ಟಿನಲ್ಲಿ ಒಂದೊಳ್ಳೆ ಚರ್ಚೆಯ ನಂತರ ಎಲ್ಲರೂ ನಂದಿ ಬೆಟ್ಟದಿಂದ ಕೆಳಗಿಳಿದೆವು. ಮಾರ್ಗ ಮಧ್ಯ ಸಿಕ್ಕ ಕೆಲ ಸಸ್ಯಗಳ ವಿವರಣೆ ನೀಡಲಾಯಿತು. ಭೋಜನದ ನಂತರ ಗವ್ಯೋತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪೆರೇಸಂದ್ರದ ಸಾದಲಿಯ ಕುಮಾರಿ ನವ್ಯಶ್ರೀ ರಾಸಾಯನಿಕಮುಕ್ತವಾಗಿ ಬೆಳೆದ ಅಂಜೂರ ಎಲ್ಲರ ಗಮನ ಸೆಳೆಯಿತು. ಹಾಗೆಯೇ ತಂಡದ ಸದಸ್ಯರೇ ಆದ ಸುಧಾಕರನ್ ಅವರ ಸಿಹಿ ಮತ್ತು ಇತರ ತಿನಿಸುಗಳು ಕ್ಷಣಾರ್ಧದಲ್ಲಿ ಮಾರಾಟವಾದವು. ಮುಂದೆಯೂ ಇಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ಅಳಿವಿನಂಚಿನಲ್ಲಿರುವ ದೇಸಿ ಹಸುಗಳ ಕುರಿತು ಜಾಗೃತಿ ಮೂಡಿಸುವುದು ಗೋಪಾಲ್ಸ್‌ನ ಆಶಯವಾಗಿದೆ. ನಿಮಗೂ ಗೋಪಾಲ್ಸ್‌ನ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಅಥವಾ ನಿಮ್ಮೂರಿನಲ್ಲಿ ನೀವೇ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕೆಂದರೆ ಸಂಪರ್ಕಿಸಿ: 9632561110